**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 02 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ರಾಜ್ಯದ ಮೇಲ್ಛಾವಣಿ (ರೂಪ್‌ಟಾಪ್) ಸೋಲಾರ್ ವಿದ್ಯುಚ್ಛಕ್ತಿ ಉತ್ಪಾದಿಸಲು ಪ್ರತಿ ಮನೆಗಳಲ್ಲಿಯೂ ಸೋಲಾರ್ ರೂಪ್‌ಟಾಪ್ ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮದ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆಯುವ ವಿಷಯದ ಕುರಿತು.

* * * * *

**ಉತ್ತರ**:- ರಾಜ್ಯದಲ್ಲಿ ಮೇಲ್ಛಾವಣಿ (ರೂಫ್ ಟಾಫ್) ಸೋಲಾರ್ ವಿದ್ಯುಚ್ಛಕ್ತಿ ಉತ್ಪಾದನೆ ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತಿವೆ:

ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27 ಜಾರಿಗೊಳಿಸಿದ್ದು, ನೀತಿಯ ಅವಧಿಯಲ್ಲಿ 1GW ವರೆಗೆ ಗ್ರಿಡ್ ಸಂಪರ್ಕಿತ ಸೌರ ಮೇಲ್ಛಾವಣಿ ಘಟಕಗಳನ್ನು ಒಳಗೊಂಡು 10GW ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗುರಿ ಹೊಂದಲಾಗಿದೆ.

ರಾಜ್ಯದಲ್ಲಿ ಹೆಚ್ಚಿನ ಸೌರ ಮೇಲ್ಛಾವಣಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ದಿನಾಂಕ:24.05.2024ರಂದು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿರ್ದೇಶನಗಳನ್ನು ನೀಡಿ ಆದೇಶ ಹೊರಡಿಸಲಾಗಿದೆ.

ಮುಂದುವರೆದಂತೆ, ಸೌರ ಮೇಲ್ಛಾವಣಿ ಘಟಕಗಳ ಸ್ಥಾಪನೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು (MNRE) ಪಿಎಂ ಸೂರ್ಯ ಘರ್ ಯೋಜನೆಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಪಿಎಂ ಸೂರ್ಯ ಘರ್ ಯೋಜನೆಯಡಿ ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸುವ ಗೃಹ ಬಳಕೆ ಗ್ರಾಹಕರಿಗೆ MNRE ಯಿಂದ ಈ ಕೆಳಗಿನಂತೆ ಸಹಾಯಧನವನ್ನು ಒದಗಿಸಲಾಗುತ್ತಿದೆ.

| Sl No | Type of Residential Segment | Present CFA applicable |
|---|---|---|
| 1. | Residential sector (first 2kW of RTS capacity or part thereof) | Rs. 30,000 per kW or part thereof |
| 2. | Residential sector (with additional RTS capacity of 1 kW or part thereof) | Rs. 18,000 for additional kW or part thereof |
| 3. | Residential sector (additional RTS capacity beyond 3 kW) | No additional CFA |
| 4. | Group Housing Societies/Residential Welfare Associations (GHS/RWA) etc., for common facilities, including EV Charging, up to 500kW (@3 kW per house), with the upper limit being inclusive of individual rooftop plants installed by individual residents in the GHS/RWA) | Rs. 18,000 per kW |

ಪಿಎಂ ಸೂರ್ಯ ಘರ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

- ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯನ್ನು (ಬೆವಿಕಂ) ರಾಜ್ಯದ ನೋಡಲ್ ಸಂಸ್ಥೆಯನ್ನಾಗಿ ನೇಮಿಸಿದೆ.
- ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮತ್ತು ಇತರೆ ಇಲಾಖೆಗಳ ಸಮನ್ವಯಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ District Level Committee" (DLC) ರಚಿಸಲಾಗಿದೆ.
- ಯೋಜನೆಯ ಕುರಿತಾದ ಮಾಹಿತಿ, ಸಬ್ಸಿಡಿ ವಿವರ ಮತ್ತು ಪ್ರಯೋಜನೆಗಳ ಕುರಿತಾದ Pamphlets ಗಳನ್ನು ಸಿದ್ಧಪಡಿಸಿ ಗ್ರಾಹಕರಿಗೆ ವಿತರಿಸಲಾಗುತ್ತಿದೆ.
- ಅಲ್ಲದೇ, ಸಾಮಾಜಿಕ ಜಾಲತಾಣ, ಪ್ರಿಂಟ್ ಮೀಡಿಯಾ, ರೇಡಿಯೋ ಇತರೆ ಕಡೆಗಳಲ್ಲಿ ಹೆಚ್ಚಿನ ಜಾಹಿರಾತು ಮತ್ತು ಪ್ರಚಾರ ನೀಡಲಾಗುತ್ತಿದೆ.
- ಪಿಎಂ ಸೂರ್ಯ ಘರ್ ಯೋಜನೆಯಡಿ Saturation of Government buildings with Solar roof top ಕುರಿತಂತೆ ಕ್ರಮ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಸರ್ಕಾರಿ ಕಟ್ಟಡಗಳ ಮೇಲೆ ಸೌರ ಮೇಲ್ಛಾವಣಿಯನ್ನು ಸರ್ಕಾರಿ ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಕ್ರೆಡಲ್ ಸಂಸ್ಥೆಯು ನೋಡಲ್ ಸಂಸ್ಥೆಯಾಗಿದೆ.

ಈವರೆಗೆ ಪಿಎಂ ಸೂರ್ಯ ಘರ್ ಯೋಜನೆಯಡಿ 3838 ಸಂಖ್ಯೆಯ 14.5MW ಸಾಮರ್ಥ್ಯದ ಸೌರ ಮೇಲ್ಛಾವಣಿ ಯೋಜನೆಗಳು ಅನುಷ್ಠಾನಗೊಂಡಿದೆ.

ರಾಜ್ಯದಲ್ಲಿ ಅಕ್ಟೋಬರ್-2024ರ ಅಂತ್ಯಕ್ಕೆ ಒಟ್ಟು 648MW ಸಾಮರ್ಥ್ಯದ ಸೌರ ಮೇಲ್ಛಾವಣಿ ಯೋಜನೆಗಳು ಅನುಷ್ಠಾನಗೊಂಡಿದೆ.

ಸಂಖ್ಯೆ: ಎನರ್ಜಿ 321 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು